ಅಸಲು ದಾವೆ ನಂ.8/2024(122/2021)

ಪಿ.ಡಬ್ಲೂಃ 2- ಆಂಜನೇಯ ರೆಡ್ಡಿ ಬಿನ್ ಮುನಿಸ್ವಾಮಿ ರೆಡ್ಡಿ

ದಿನಾಂಕಃ 02/04/2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ಅಸಲು ದಾವೆ ನಂ.8/2024 ರ 1 ರಿಂದ 4, 6 ಮತ್ತು 7ನೇ ಪ್ರತಿವಾದಿಯರು ಹಾಗೂ ಅಸಲು ದಾವೆ ನಂ.122/2021 ರ 1, 2 ಮತ್ತು 7ನೇ ಪ್ರತಿವಾದಿಯರ ಪರವಾಗಿ ಶ್ರೀ ಎನ್ ಎಸ್ ವಕೀಲರಿಂದ**

1. ನನ್ನ ಮದುವೆಯು 1989 ರಲ್ಲಿ ಭಾರತಿ ಎಂಬುವವರ ಜೊತೆ ಆಗಿರುತ್ತದೆ. ಸದರಿ ಭಾರತಿಯು ಎಸ್ ಸಿ ಜಾತಿಗೆ ಸೇರಿದ್ದರು ಎಂದರೆ ಸರಿ. ನಾನು ಒಬ್ಬ ಎಸ್ ಸಿ ಜಾತಿಯ ಮಹಿಳೆಯನ್ನು ಮದುವೆಯಾಗಿದ್ದಕ್ಕೆ ನನಗೂ ಮತ್ತು ನನ್ನ ಕುಟುಂಬದವರಿಗೂ ಭಿನ್ನಾಭಿಪ್ರಾಯಗಳು ಬಂದಿರುತ್ತದೆ ಎಂದರೆ ಸರಿ. ನಾನು ನನ್ನ ಮದುವೆಯಾಗುವವರೆಗೂ ನಮ್ಮ ತಂದೆ ತಾಯಿಯ ಜೊತೆ ಬಲುವನಹಳ್ಳಿಯಲ್ಲಿ ವಾಸವಾಗಿದ್ದೆ ಎಂದರೆ ಸರಿ. ಮೇಲೆ ಹೇಳಿದಂತೆ ಭಿನ್ನಾಭಿಪ್ರಾಯಗಳು ಬಂದ ನಂತರ ನಾನು ನನ್ನ ಮದುವೆಯಾದ ನಂತರ ನನ್ನ ಕುಟುಂಬದ ಜೊತೆ ಶಿರಸಿ ಗೆ ಹೋಗಿ ವಾಸವಾಗಿರುತ್ತೇನೆ ಎಂದರೆ ಸರಿಯಲ್ಲ ಆದರೆ ನಾನು ತರಕಾರಿ ವ್ಯಾಪಾರಕ್ಕಾಗಿ ಹೋಗಿ ನೆಲೆಸಿರುತ್ತೇನೆ. ನಾನು ಬಲುವನಹಳ್ಳಿ ಗ್ರಾಮದಲ್ಲಿ ವಾಸವಾಗಿರುವಾಗ ವ್ಯವಸಾಯ ಮಾಡುತ್ತಿದ್ದೆ. ನಾನು ಶಿರಸಿಯಲ್ಲಿ ಬಾಡಿಗೆಗೆ ಮನೆ ಪಡೆದುಕೊಂಡು ನನ್ನ ಹೆಂಡತಿಯ ಜೊತೆ ಶಿರಸಿಯಲ್ಲಿ ವಾಸವಾಗಿದ್ದೆ ಎಂದರೆ ಸರಿ. ಅದೇ ರೀತಿ ನಾನು ಶಿರಸಿಯಲ್ಲಿ ನನ್ನ ಉಪಜೀವನಕ್ಕಾಗಿ ತರಕಾರಿ ವ್ಯಾಪಾರ ಮಾಡುತ್ತಿದ್ದೆ ಎಂದರೆ ಸರಿ. ನನಗೆ ಶಿರಸಿಯಲ್ಲಿಯೇ ಇಬ್ಬರು ಮಕ್ಕಳು ಹುಟ್ಟಿರುತ್ತಾರೆ ಎಂದರೆ ಸರಿ. ನನ್ನ ಮಕ್ಕಳ ಪಾಲನೆ ಪೋಷಣೆ ಮತ್ತು ವಿದ್ಯಾಭ್ಯಾಸವನ್ನು ನಾನು ಮತ್ತು ನನ್ನ ಹೆಂಡತಿ ಮಾಡಿರುತ್ತೇವೆ ಎಂದರೆ ಸರಿ. ನಾನು ಶಿರಸಿಯಲ್ಲಿ ತರಕಾರಿ ವ್ಯಪಾರವನ್ನು ಹೊರತು ಪಡಿಸಿ ಬೇರೆ ಯಾವುದೇ ಉದ್ಯೋಗ ಮಾಡುತ್ತಿರಲಿಲ್ಲ.

2. ನನ್ನ ಇಬ್ಬರೂ ಮಕ್ಕಳು ಪದವಿ ಮುಗಿಸಿರುತ್ತಾರೆ. ನನ್ನ ಹಿರಿಯ ಮಗನಿಗೆ ಮದುವೆಯಾಗಿದ್ದು ಮದುವೆಯನ್ನು ನಾನೇ ಮಾಡಿರುತ್ತೇನೆ ಎಂದರೆ ಸರಿ. ನಾನು ನಿಪಿ-8 ರಂತೆ ನನ್ನ ಸಹೋದರರಾದ ರವಿ ರೆಡ್ಡಿ ಮತ್ತು ವೆಂಕಟಾರೆಡ್ಡಿ ರವರಿಗೆ ನನ್ನ ಹಿಸ್ಸೆಯ ಜಮೀನನ್ನು ಬಿಟ್ಟು ಕೊಟ್ಟು ದಾಖಲೆ ಬರೆದುಕೊಟ್ಟಿರುತ್ತೇನೆ ಎಂದು ಈಗ ಸುಮಾರು 5 ವರ್ಷಗಳ ಹಿಂದೆ ನನ್ನ ಮಕ್ಕಳು ತಿಳಿದು ನಂತರ ನನ್ನ ಹಿರಿಯ ಮಗ ನನ್ನಿಂದ ಪ್ರತ್ಯೇಕವಾಗಿ ವಾಸವಾಗಿರುತ್ತಾನೆ. ಆತನು ಪ್ರತ್ಯೇಕವಾಗಿ ವಾಸಿಸಲು ಪ್ರಾರಂಭಿಸಿದಾಗ ಆತನಿಗೆ ಮದುವೆ ಆಗಿರಲಿಲ್ಲ. ಆತನಿಗೆ ಈಗ ಸುಮಾರು 5 ವರ್ಷಗಳ ಹಿಂದೆ ಮದುವೆಯಾಗಿರುತ್ತದೆ. ಸದರಿ ಮದುವೆಗೆ ನನ್ನ ತಂದೆಯ ಕುಟುಂಬದ ಕಡೆಯಿಂದ ಯಾರು ಬಂದಿರಲಿಲ್ಲ ಎಂದರೆ ಸರಿ. ನನ್ನ ಹಿರಿಯ ಮಗ ಮನೆ ಬಿಟ್ಟು ಪ್ರತ್ಯೇಕವಾಗಿ

ವಾಸಿಸಲು ಪ್ರಾರಂಭಿಸಿದಾಗ ಆತನು ದಾಂಡೇಲಿಯಲ್ಲಿ ಕೆಲಸ ಮಾಡುತ್ತಿದ್ದನು. ನನ್ನ ಕಿರಿಯ ಮಗ ಈಗಲೂ ಸಹ ನನ್ನ ಜೊತೆಯೇ ವಾಸವಾಗಿರುತ್ತಾನೆ.

3. ನಿಪಿ-8 ದಾಖಲೆಯ ಆಧಾರದ ಮೇಲೆ ರವಿ ರೆಡ್ಡಿ ಮತ್ತು ವೆಂಕಟರೆಡ್ಡಿ ರವರು ನನ್ನ ವಿರುದ್ಧ ಕರಾರು ಪತ್ರದ ಅನುಷ್ಠಾನಕ್ಕಾಗಿ ಅಸಲು ದಾವೆ ನಂ.760/1991 ವನ್ನು ದಾಖಲಿಸಿದ್ದರು ಎಂದರೆ ಸರಿ. ಸದರಿ ದಾವೆ ದಾಖಲಾದಾಗ ನಾನು ಶಿರಸಿಯಲ್ಲಿ ವಾಸವಿದ್ದೆ ಎಂದರೆ ಸರಿ. ಸದರಿ ದಾವೆ ದಾಖಲಾಗುವುದಕ್ಕೂ ಮುಂಚೆ ರವಿ ರೆಡ್ಡಿ ಮತ್ತು ವೆಂಕಟರೆಡ್ಡಿ ರವರು ವಕೀಲರ ಮೂಲಕ ನನಗೆ ಒಂದು ನೋಟಿಸ್ ಕೊಟ್ಟಿದ್ದರು ಎಂದರೆ ಸರಿ. ನಾನು ಸದರಿ ದಾವೆಯಲ್ಲಿ ವಕೀಲರ ಮೂಲಕ ಹಾಜರಾಗಿ ದಾವೆಯನ್ನು ನಡೆಸಿರುತ್ತೇನೆ ಎಂದರೆ ಸರಿ. ಸದರಿ ದಾವೆ ವಿಚಾರಣೆಯಲ್ಲಿರುವಾಗಲೂ ಸಹ ನಾನು ಶಿರಸಿಯಲ್ಲಿಯೇ ವಾಸವಿದ್ದೆ ಎಂದರೆ ಸರಿ. ಸದರಿ ದಾವೆಗೆ ಹಾಜರಾಗಲು ನಾನು ಶಿರಸಿಯಿಂದ ಕೆ.ಜಿ.ಎಫ್ ಗೆ ಬರುತ್ತಿದ್ದ ವಿಚಾರ ನನ್ನ ಮಕ್ಕಳಿಗೆ ಗೊತ್ತಿತ್ತು ಎಂದರೆ ಸರಿಯಲ್ಲ ಕಾರಣ ಅವರು ಚಿಕ್ಕ ವಯಸ್ಸಿನವರಾಗಿದ್ದರು. ಸದರಿ ದಾವೆಯಲ್ಲಿ ನನ್ನ ವಿಚಾರಣೆ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನಾನು ನನ್ನ ಲಿಖಿತ ಹೇಳಿಕೆ ಸಲ್ಲಿಸಿದ್ದೆ ಎಂದರೆ ಸರಿ. ನಾನು ಸದರಿ ದಾವೆಯಲ್ಲಿ ನನ್ನ ವಿಚಾರಣೆ ಮಾಡಿ ನನ್ನ ಪರವಾಗಿ ಸಾಕ್ಷಿದಾರರ ವಿಚಾರಣೆಯನ್ನು ಮಾಡಿದ್ದರೂ ಸಹ ವಿಚಾರಣೆ ಆಗಿರುವುದಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಸದರಿ ದಾವೆಯು ರವಿ ರೆಡ್ಡಿ ಮತ್ತು ವೆಂಕಟರೆಡ್ಡಿ ರವರ ಪರವಾಗಿ ಡಿಕ್ರಿ ಆಗಿತ್ತು ಎಂದರೆ ಸರಿ ಆದರೆ ನಾನು ಅವರಿಗೆ ಯಾವುದೇ ಕ್ರಯದ ಕರಾರು ಪತ್ರ ಬರೆದುಕೊಟ್ಟಿರುವುದಿಲ್ಲ. ನಾನು ಸದರಿ ತೀರ್ಪಿನ ವಿರುದ್ಧ ಆರ್ ಎ ನಂ.75/2000 ವನ್ನು ದಾಖಲಿಸಿದ್ದು ಅದು ವಜಾಗೊಂಡಿರುತ್ತದೆ ಎಂದರೆ ಸರಿ.

4. ನಂತರ ಅಸಲು ದಾವೆ ನಂ.760/1991 ರ ಡಿಕ್ರಿ ಆಧಾರದ ಮೇಲೆ ರವಿ ರೆಡ್ಡಿ ಮತ್ತು ವೆಂಕಟರೆಡ್ಡಿ ರವರು ನನ್ನ ವಿರುದ್ಧ ನೊಂದಾಯಿತ ಕ್ರಯ ಪತ್ರ ಪಡೆಯಲು ಜಾರಿ ಅರ್ಜಿ ಸಂಖ್ಯೆ 194/2011 ವನ್ನು ದಾಖಲಿಸಿದ್ದರು ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಾನು ರವಿ ರೆಡ್ಡಿ ಮತ್ತು ವೆಂಕಟರೆಡ್ಡಿ ರವರಿಗೆ ಡಿಕ್ರಿಯ ಪ್ರಕಾರ ನೊಂದಾಯಿತ ಕ್ರಯ ಪತ್ರವನ್ನು ಬರೆದುಕೊಡದೇ ಇದ್ದುದ್ದರಿಂದ ಅವರು ನ್ಯಾಯಾಲಯದ ಮೂಲಕ ಕ್ರಯ ಪತ್ರ ಬರೆಯಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಕ್ರಯ ಪತ್ರದ ಆಧಾರದ ಮೇಲೆ ಈಗ ದಾವಾ ಸ್ವತ್ತುಗಳ ಪಹಣಿಗಳು ರವಿ ರೆಡ್ಡಿ ಮತ್ತು ವೆಂಕಟರೆಡ್ಡಿ ರವರ ಹೆಸರಿಗೆ ದಾಖಲಾಗಿರುತ್ತವೆ ಎಂದರೆ ಸರಿ. ಪಹಣಿಗಳು ರವಿ ರೆಡ್ಡಿ ಮತ್ತು ವೆಂಕಟರೆಡ್ಡಿ ರವರ ಹೆಸರಿಗೆ ಬದಲಾವಣೆ ಆಗಿರುವ ಬಗ್ಗೆ ನನ್ನ ಮಕ್ಕಳಿಗೆ ಗೊತ್ತು ಎನ್ನುವ

ಸೂಚನೆಗೆ ಅವರಿಗೆ ಗೊತ್ತಾದ ನಂತರವೇ ಅವರು ಅಸಲು ದಾವೆ ನಂ.8/2024 ವನ್ನು ದಾಖಲಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಪಹಣಿಗಳ ವಿಚಾರವು ನನ್ನ ಮಕ್ಕಳಿಗೆ 2020 ರಲ್ಲಿ ಗೊತ್ತಾಗಿರುತ್ತದೆ.

5. ನಾನು ಮದುವೆಯಾದ ನಂತರ ಶಾಶ್ವತವಾಗಿ ಶಿರಸಿಯಲ್ಲಿ ನೆಲೆಸಲು ಹೋಗಿದ್ದು ನನಗೆ ಊರಲ್ಲಿ ಯಾವುದೇ ಸ್ವತ್ತುಗಳು ಬೇಡ ಎಂದು ಹೇಳಿ ನಾನು ನನ್ನ ಹಿಸ್ಸೆಯ ಜಮೀನುಗಳಿಗೆ ಸಂಬಂಧಿಸಿ ರವಿ ರೆಡ್ಡಿ ಮತ್ತು ವೆಂಕಟರೆಡ್ಡಿ ರವರ ಹೆಸರಿಗೆ ನಿಪಿ-8 ರಂತೆ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾಖಲೆಯ ಆಧಾರದ ಮೇಲೆ ದಾವೆ ನಡೆದು ರವಿ ರೆಡ್ಡಿ ಮತ್ತು ವೆಂಕಟರೆಡ್ಡಿ ರವರ ಹೆಸರಿನಲ್ಲಿ ನನ್ನ ಹಿಸ್ಸೆಯ ಜಮೀನಿಗೆ ಸಂಬಂಧಿಸಿ ನೊಂದಾಯಿತ ಕ್ರಯ ಪತ್ರ ಆಗಿರುತ್ತದೆ ಮತ್ತು ಸದರಿ ವಿಚಾರ ನನ್ನ ಮಕ್ಕಳಿಗೆ ಮೊದಲಿನಿಂದಲೂ ಗೊತ್ತು ಎಂದರೆ ಸರಿಯಲ್ಲ. ನನಗೆ ದಾವಾ ಸ್ವತ್ತುಗಳಲ್ಲಿ 1/5 ನೇ ಭಾಗ ಇತ್ತು ಎಂದರೆ ಸರಿ. ಅಸಲು ದಾವೆ ನಂ.760/1991 ರಲ್ಲಿ ಇದ್ದ ಸ್ವತ್ತುಗಳನ್ನೇ ನನ್ನ ಮಕ್ಕಳು ಮತ್ತು ನಾನು ಈ ದಾವೆಗಳಲ್ಲಿ ತೋರಿಸಿರುತ್ತೇವೆ ಎಂದರೆ ಸರಿ. ನಾನು ಈಗಾಗಲೇ ನನ್ನ ಹಿಸ್ಸೆಯ ಜಮೀನುಗಳಿಗೆ ಸಂಬಂಧಿಸಿ ರವಿ ರೆಡ್ಡಿ ಮತ್ತು ವೆಂಕಟರೆಡ್ಡಿ ರವರಿಗೆ ನಿಪಿ-8 ರಂತೆ ಕ್ರಯದ ಕರಾರು ಪತ್ರ ಬರೆದು ಕೊಟ್ಟಿರುವ ಕಾರಣ ಮತ್ತು ಅವರ ಪರವಾಗಿ ಡಿಕ್ರಿ ಮತ್ತು ಕ್ರಯ ಪತ್ರ ಆಗಿರುವ ಪರವಾಗಿ ನನಗೆ ಮತ್ತು ನನ್ನ ಮಕ್ಕಳಿಗೆ ಯಾವುದೇ ಭಾಗ ಇರುವುದಿಲ್ಲ ಎಂದರೆ ಸರಿಯಲ್ಲ.

6. ನಾನು ಈ ದಾವೆ ದಾಖಲಿಸುವುದಕ್ಕೂ ಮುಂಚೆ ದಾವಾ ಸ್ವತ್ತುಗಳಲ್ಲಿ ಭಾಗ ಕೇಳಿ ಅಸಲು ದಾವೆ ನಂ.66/2003 ವನ್ನು ದಾಖಲಿಸಿದ್ದೆ ಎಂದರೆ ಸರಿ. ಸದರಿ ಅಸಲು ದಾವೆ ನಂ.66/2003 ದಾವೆಯನ್ನು ದಾಖಲಿಸಿದಾಗ ನಾನು ಮತ್ತು ನನ್ನ ಮಕ್ಕಳು ಜೊತೆಯಲ್ಲಿ ವಾಸವಾಗಿದ್ದೆವು ಎಂದರೆ ಸರಿ. ಸದರಿ ದಾವೆ ವಿಚಾರವೂ ಸಹ ನನ್ನ ಮಕ್ಕಳಿಗೆ ಚೆನ್ನಾಗಿ ಗೊತ್ತಿತ್ತು ಎಂದರೆ ಸರಿಯಲ್ಲ ಕಾರಣ ಅವರು ಚಿಕ್ಕ ವಯಸ್ಸಿನವರು ಆಗಿದ್ದು ಮತ್ತು ಅವರು ಶಾಲೆಗೆ ಹೋಗುತ್ತಿದ್ದು ಸದರಿ ವಿಚಾರ ಅವರಿಗೆ ಗೊತ್ತಾಗಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಮಕ್ಕಳು ದೊಡ್ಡವರಾದ ನಂತರ ನಾನು ಸದರಿ ದಾವೆಯ ವಿಚಾರವನ್ನು ಅವರಿಗೆ ಹೇಳಿರುವುದಿಲ್ಲ. ಸದರಿ ದಾವೆಯಲ್ಲಿ ನಾನು ಹಾಜರಾಗದೇ ಇದ್ದುದ್ದಕ್ಕಾಗಿ ಅದು ದಿನಾಂಕ 27.03.2007 ರಂದು ವಜಾಗೊಂಡಿರುತ್ತದೆ ಎಂದರೆ ಸರಿ. ಸದರಿ ದಾವೆಯನ್ನು ಮರು ವಿಚಾರಣೆಗೆ ತೆಗೆದುಕೊಳ್ಳಬೇಕು ಎಂದು ಹೇಳಿ ನಾನು ಮಿಸ್ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಮಿಸ್ ಅರ್ಜಿಯು ಮುಂದೆ ಏನಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಅಸಲು ದಾವೆ ನಂ.66/2003 ರಲ್ಲಿ ರವಿ ರೆಡ್ಡಿ ಮತ್ತು ವೆಂಕಟರೆಡ್ಡಿ ರವರು ಹಾಜರಾಗಿ ನಾನು ಅವರಿಗೆ ಹೆಸರಿಗೆ ಕರಾರು ಪತ್ರ ಬರೆದುಕೊಟ್ಟಿರುತ್ತೇನೆ ಎಂದು ಹೇಳಿ ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ

ದಾವೆಯಲ್ಲಿ ನನಗೆ ಅನುಕೂಲ ಆಗುವುದಿಲ್ಲ ಎಂದು ಭಾವಿಸಿ ನಾನು ಸದರಿ ದಾವೆಯನ್ನು ನಡೆಸದೇ ಬಿಟ್ಟಿರುತ್ತೇನೆ ಮತ್ತು ಆ ಕಾರಣಕ್ಕಾಗಿ ಅದು ವಜಾಗೊಂಡಿರುತ್ತದೆ ಎಂದರೆ ಸರಿಯಲ್ಲ. ಇಂದಿನವರೆಗೂ ಸಹ ನಾನು ಅಸಲು ದಾವೆ ನಂ.66/2003 ವನ್ನು ದಾಖಲಿಸಿದ್ದ ಬಗ್ಗೆ ಮತ್ತು ಅದು ವಜಾ ಆಗಿರುವ ಬಗ್ಗೆ ನನ್ನ ಮಕ್ಕಳಿಗೆ ಹೇಳಿರುವುದಿಲ್ಲ.

7. ನಾನು ಅಸಲು ದಾವೆ ನಂ.66/2003 ವನ್ನು ದಾಖಲಿಸಿದ್ದಾಗ ನಾನು ಶಿರಸಿಯಲ್ಲಿಯೇ ವಾಸವಿದ್ದೆ ಎಂದರೆ ಸರಿ. ಈಗಲೂ ಸಹ ನಾನು ಶಿರಸಿಯಲ್ಲಿಯೇ ವಾಸವಾಗಿರುತ್ತೇನೆ ಎಂದರೆ ಸರಿ. ನಾನು ಮದುವೆಯಾದ ನಂತರ ಶಿರಸಿಯಲ್ಲಿ ವಾಸಿಸಲು ಪ್ರಾರಂಭಿಸಿದ ನಂತರ ಬಲುವನಹಳ್ಳಿಯಲ್ಲಿ ಯಾವ ಸಮಯದಲ್ಲಾದರೂ ವಾಸವಿದ್ದೆ ಎಂದು ತೋರಿಸಲು ನನ್ನ ಹತ್ತಿರ ಯಾವುದೇ ದಾಖಲೆಗಳು ಇರುವುದಿಲ್ಲ ಆದರೆ ನಾನು ಬಲುವನಹಳ್ಳಿಗೆ ಬರುತ್ತಿರುತ್ತೇನೆ ಮತ್ತು ಅಲ್ಲಿ ವಾಸವಾಗಿರುತ್ತೇನೆ. ನಾನು ಶಿರಸಿಗೆ ಹೋದ ನಂತರ ಯಾವತ್ತೂ ಬಲುವನಹಳ್ಳಿಗೆ ಬಂದು ವಾಸವಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈಗ ಸುಮಾರು 60 ವರ್ಷಗಳಿಂದ ಶಿರಸಿಯಲ್ಲಿಯೇ ಶಾಶ್ವತವಾಗಿ ನಮ್ಮ ತಂದೆಯ ಕುಟುಂಬದಿಂದ ಪ್ರತ್ಯೇಕವಾಗಿ ವಾಸವಾಗಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ನಮ್ಮ ತಂದೆ ತಾಯಿ ಮರಣ ಹೊಂದಿದಾಗ ಅವರ ಅಂತ್ಯಕ್ರಿಯೆಯಲ್ಲಿ ಭಾಗಿ ಆಗಿರುತ್ತೇನೆ ಎಂದು ನುಡಿಯುತ್ತಾರೆ. ಈ ವಿಚಾರವನ್ನು ನಾನು ನನ್ನ ವಾದ ಪತ್ರದಲ್ಲಿ ಹೇಳಿರುತ್ತೇನೆ. ನಾನು ಸದರಿ ಯಾವುದೇ ವಿಚಾರವನ್ನು ನನ್ನ ವಾದ ಪತ್ರದಲ್ಲಿ ಹೇಳಿರುವುದಿಲ್ಲ ಮತ್ತು ನಾನು ನಮ್ಮ ತಂದೆ ತಾಯಿಯ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿಲ್ಲ ಎಂದರೆ ಸರಿಯಲ್ಲ.

8. ಅಸಲು ದಾವೆ ನಂ.66/2003 ವಜಾಗೊಂಡ ನಂತರ ನಾನು ನನಗೆ ಭಾಗ ಬೇಕು ಎಂದು ಹೇಳಿ ಯಾವುದೇ ಪಂಚಾಯ್ತಿ ಕರೆದಿರುವುದಿಲ್ಲ. 2020 ರಲ್ಲಿ ನನ್ನ ಮಕ್ಕಳು ನಮ್ಮ ಪಿತ್ರಾರ್ಜಿತ ಸ್ವತ್ತುಗಳು ಏನಾಗಿರುತ್ತವೆ ಎಂದು ಪ್ರಶ್ನಿಸಿ ಅವುಗಳಲ್ಲಿ ತಮ್ಮ ಭಾಗವನ್ನು ನನ್ನ ಹತ್ತಿರ ಕೇಳಿದ್ದರು ಮತ್ತು ಆಗ ನಾನು ಬಲುವನಹಳ್ಳಿ ಗ್ರಾಮದಲ್ಲಿರುವ ಸ್ವತ್ತುಗಳ ಬಗ್ಗೆ ಮತ್ತು ನನ್ನ ಮತ್ತು ರವಿ ರೆಡ್ಡಿ ಮತ್ತು ವೆಂಕಟರೆಡ್ಡಿ ರವರ ಮಧ್ಯ ನಡೆದ ದಾವೆಗಳ ಬಗ್ಗೆ ನನ್ನ ಮಕ್ಕಳಿಗೆ ಹೇಳಿರುತ್ತೇನೆ. ಆಗ ನನ್ನ ಮಕ್ಕಳು ನನಗೆ ವಿರುದ್ಧವಾಗಿದ್ದು ನಂತರ ನನ್ನ ವಿರುದ್ಧ ಅಸಲು ದಾವೆ ನಂ.8/2024 ವನ್ನು ದಾಖಲಿಸಿರುತ್ತಾರೆ. ನಾನು 2021 ರಲ್ಲಿ ಅಸಲು ದಾವೆ ನಂ.122/2021 ವನ್ನು ದಾಖಲಿಸಿದ ವಿಚಾರ ನನ್ನ ಮಕ್ಕಳಿಗೆ ಹೇಳಿರುತ್ತೇನೆ. ನಾನು ರವಿ ರೆಡ್ಡಿ, ವೆಂಕಟರೆಡ್ಡಿ ಮತ್ತು ಮುನಿಸ್ವಾಮಿ ರೆಡ್ಡಿ ರವರ ಕುಟುಂಬದ ಸದಸ್ಯ ನಾಗಿರುವುದಿಲ್ಲ ಮತ್ತು ನನಗೆ ದಾವಾ ಸ್ವತ್ತುಗಳಲ್ಲಿ

ಯಾವುದೇ ಭಾಗ ಇರುವುದಿಲ್ಲ ಎಂದರೆ ಸರಿಯಲ್ಲ. ಈಗ ದಾವಾ ಸ್ವತ್ತುಗಳೆಲ್ಲವೂ ನನ್ನ ಸಹೋದರರು ಮತ್ತು ಅವರ ಕುಟುಂಬಕ್ಕೆ ಸೇರಿರುತ್ತವೆ ಮತ್ತು ಅವುಗಳಲ್ಲಿ ನನಗಾಗಲಿ ಅಥವಾ ನನ್ನ ಮಕ್ಕಳಿಗಾಗಲಿ ಯಾವುದೇ ಭಾಗ ಇರುವುದಿಲ್ಲ ಎಂದರೆ ಸರಿಯಲ್ಲ. ನಾನೇ ನನ್ನ ಮಕ್ಕಳಿಗೆ ಕುಮ್ಮಕ್ಕು ನೀಡಿ ಅವರ ಮೂಲಕ ಅಸಲು ದಾವೆ ನಂ.8/2024 ವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಈಗಾಗಲೇ ದಾವಾ ಸ್ವತ್ತುಗಳ ಮೇಲೆ ನನ್ನ ಮತ್ತು ರವಿ ರೆಡ್ಡಿ ಮತ್ತು ವೆಂಕಟರೆಡ್ಡಿ ರವರ ಮಧ್ಯ ದಾವೆಗಳು ನಡೆದು ಅವರ ಪರವಾಗಿ ಆದೇಶವಾಗಿರುವುದರಿಂದ ಈ ದಾವೆ ನಡೆಸಲು ನನಗೆ ಯಾವುದೇ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಆದರೂ ಸಹ ನಾನು ಸುಳ್ಳು ದಾವೆ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

9. ನಿಪಿ–149 ಇ ಖಾತೆಯು ರವಿ ರೆಡ್ಡಿ ರವರ ಹೆಸರಿನಲ್ಲಿ 2020 ರಲ್ಲಿ ದಾಖಲಾಗಿರುತ್ತದೆ. ಸದರಿ ಖಾತೆಯ ಸ್ವತ್ತಿನ ಹಳೇಯ ಖಾತೆ ಸಂಖ್ಯೆ 17 ಆಗಿರುತ್ತದೆ ಎಂದರೆ ಸರಿ. ನಾನು ಈ ದಾವೆಯನ್ನು ಕಾಲ ಪರಿಮಿತಿಯ ನಂತರ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಮುಜಫರ್)
1 ನೇ ಅಪರ ಹಿರಿಯ ಸಿ.ಜೆ. ಮತ್ತು ಜೆಎಂಎಫ್‌ಸಿ
ಕೆಜಿಎಫ್